# ಲೀಲಾ ವಿಳಾಸ

ಬೇಂದ್ರೆಯವರ ಪ್ರಸಿದ್ಧ ಕವನಸಂಕಲನದ ಹೆಸರು 'ನಾದಲೀಲೆ'. ಇಲ್ಲಿ ನಾದ ಮತ್ತು ಲೀಲೆ ಎಂಬ ಬೇರೆಬೇರೆ ಪದಗಳು ಸೇರಿ 'ನಾದಲೀಲೆ' ಎಂದಾಗಿದೆ. ನಾದದ ಲೀಲೆ ನಾದಲೀಲೆ! ಇಲ್ಲಿರುವ 'ಲೀಲೆ' ಎಂಬುದು ಸಂಗೀತ ಸಾಹಿತ್ಯ ಸಂಸ್ಕೃತಿ ಅಧ್ಯಾತ್ಮ ಸಾಧನೆ ಲೋಕತಂತ್ರ ವಸ್ತುತಂತ್ರ ಮುಂತಾದವುಗಳಲ್ಲಿ ಬಳಕೆಯಾಗಿದೆ. ಕನ್ನಡ ಮತ್ತು ಮರಾಠಿ ಸಾಹಿತ್ಯದ ನಡುಗಾಲದಲ್ಲಿ 'ಲೀಲೆ' ಎಂಬುದು ಹೆಚ್ಚು ಬಳಕೆಗೆ ಬಂದಿದೆ. ಇದು ಗುರುಶಿಷ್ಯರ ನಡುವಣ ರಹಸ್ಯತಮ ಕ್ರಿಯೆಯನ್ನು ಸೂಚಿಸುವಂತೆ; ಸಾಧಕಸಾಧಕರ ನಡುವಣ ಅಗಮ್ಯ ಕ್ರಿಯಾಯೋಗದ ರಹಸ್ಯವನ್ನೂ ಪರ್ಯಾಯವಾಗಿ ಇದು ಸೂಚಿಸುತ್ತದೆ. ಮರಾಠಿಯಲ್ಲಿ ಸಂತ ಜ್ಞಾನದೇವ ಮುಂತಾದವರ ಚರಿತ್ರೆಯಲ್ಲಿ ಇಂಥ 'ಲೀಲೆ'ಗಳು ಎಷ್ಟೋ ನಡೆದಿವೆ. ನಡುಗನ್ನಡದ ಎಲ್ಲಾ ಅನುಭಾವಿಕರಲ್ಲೂ ಲೀಲೆ ಉಂಟು. 'ಶಿವಲೀಲೆ' ಎಂಬುದು ಇಲ್ಲಿಯ ಮುಖ್ಯ ಪ್ರತಿಮೆ. ಸಾಮಾನ್ಯವಾಗಿ, ಎಲ್ಲಾ 'ಭಗವಂತನ ಲೀಲೆ' ಎಂದು ಹೇಳುವುದುಂಟು. ಅಸಾಮಾನ್ಯವಾದ ಘಟನೆಗಳನ್ನು 'ಲೀಲೆ' ಎಂಬ ಪದ ಸೂಚಿಸುತ್ತಿದೆ.

ಕನ್ನಡನಾಡಿನ ಹದಿನೆಂಟನೆಯ ಶತಮಾನದ ಅನುಭಾವಿಗಳಲ್ಲಿ ನವಲಗುಂದದ ನಾಗಲಿಂಗಜ್ಜನ ಹೆಸರು ಬಲು ಪ್ರಖ್ಯಾತವಾದುದು. ಈತ ಶಿಶುವಿನಾಳ ಶರೀಫ, ಸಿದ್ಧಾರೂಢ, ಅಥಣಿ ಶಿವಯೋಗಿ ಮುಂತಾದ ಅನುಭಾವಿಗಳ ಸಮಕಾಲೀನ. ಅವನು ಊರೂರು ಸುತ್ತಿ ಜನರಿಗೆ ಬೋಧನೆ ಮಾಡಿ ಅವರನ್ನು ಸನ್ಮಾರ್ಗಕ್ಕೆ ಕರೆತಂದ ನೂರಾರು ಪ್ರಸಂಗಗಳು ಆತನ ಜೀವನ ಕಥನದಲ್ಲಿ ಬರುತ್ತವೆ. ಆ ಪ್ರಸಂಗಗಳಲ್ಲಿ ಕೇವಲು ವಿಸ್ಮಯಗಳೂ ಉಂಟು; ಅಷ್ಟೇ ಅಲ್ಲ ಕೆಲವು ಅಚ್ಚರಿ ತರುವ ಸಂಗತಿಗಳೂ ಉಂಟು. ಇಂಥ ಒಂದೆರಡು ಸಂಗತಿಗಳ ಮೂಲಕ 'ಲೀಲೆ'ಯ ನೆಲೆಯನ್ನು ತಿಳಿಯಬಹುದೆಂದು ತೋರುತ್ತದೆ. ಒಮ್ಮೆ ನಾಗಲಿಂಗಜ್ಜ, ಶಿಶುವಿನಾಳ ಶರೀಫರೊಡನೆ ಹುಬ್ಬಳ್ಳಿಗೆ ಹೊರಟ. ಅವರಿಬ್ಬರು ಹುಬ್ಬಳ್ಳಿಗೆ ಹೋಗುವ ಮಾರ್ಗಮಧ್ಯದಲ್ಲಿ ಅನೇಕರು ತಮ್ಮ ಮನೆಗೆ ಸಂತದ್ವಯರನ್ನು ಕರೆದುಕೊಂಡು ಹೋಗಿ ಉಪಚರಿಸುತ್ತಿದ್ದುದುಂಟು. ಶರೀಫರು ಹಾಡಿದ ತತ್ವಪದಗಳನ್ನು ಕೇಳಿ ಎಲ್ಲರೂ ರೋಮಾಂಚನಗೊಳ್ಳುತ್ತಿದ್ದರು. ಅವರಿಬ್ಬರು ಹುಬ್ಬಳ್ಳಿಯ ಸಿದ್ಧಾಶ್ರಮವನ್ನು ತಲುಪಿದರು. ಅಲ್ಲಿ ಸಿದ್ಧಾರೂಢರನ್ನು ಕಂಡು ನಾಗಲಿಂಗಜ್ಜ ಆನಂದ ಪರವಶರಾದರು. 'ಆರೂಢಾ, ನಿನ್ನ ಮಠ ಪರಮಶಾಂತಿಯ ತಾಣವಾಗಿದೆ. ಇದು ಸದ್ಭಕ್ತರಿಗೆ ಕಲ್ಪವೃಕ್ಷವೇ ಸರಿ. ಹೀಗಾಗಿ, ಇದು ಪರಮಾರ್ಥಸಾಧಕರ ಕಣ್ಣ ಬೆಳಕಾಗಿದೆ. ಆದ್ದರಿಂದ, ಇಲ್ಲಿ ಅನ್ನಪೂರ್ಣೆಯ ಆರಾಧನೆ ನಿರಂತರವಾಗಿ ನಡೆಯುತ್ತಿರಬೇಕು. ಹಾಗಾಗಿ, ಭೂದೇವಿಯ ಒಡಲೊಳಗೆ ಓಡಾಡುತ್ತ, ಅವಳನ್ನು ಹಸನುಗೊಳಿಸುತ್ತ, ಜೀವಕೋಟಿಯ ಪ್ರಾಣಧಾರಣೆಗೆ ಬೇಕಾಗುವ ಹಣ್ಣು ಹಂಪಲುಗಳನ್ನು ದವಸಧಾನ್ಯಗಳನ್ನು ಬೆಳೆಯಲು ದಾರಿಮಾಡಿಕೊಡುವಂಥ ಈ 'ನೇಗಿಲಕುಳ'ವೇ ಅನ್ನಪೂರ್ಣಾವತಾರಿಯಾಗಿದೆ. ನಿನ್ನ ಮಠಕ್ಕೆಂದು ನಾನಿದನ್ನು ತಂದಿದ್ದೇನೆ. ಈ ನೇಗಿಲಕುಳವನ್ನು ನಿತ್ಯವೂ ಪೂಜಿಸಿದರೆ ಅನ್ನ ಸಮೃದ್ಧಿ ಉಂಟಾಗುತ್ತದೆ' ಎಂದು ಹೇಳಿ ಸಿದ್ಧಾರೂಡರ ಕೈಗೆ ಕೊಟ್ಟನು. ಅನಂತರ ಆ ಕುಳವನ್ನು ಬಾವಿಕಟ್ಟೆಯ ಮೇಲಿಟ್ಟು ಪೂಜಿಸಿದರು. ಆಗ ಸಿದ್ಧಾರೂಢರು 'ನಿನ್ನ ಆಶೀರ್ವಾದ ಈ ಮಠದ ತಲೆಯ ಮೇಲೆ ಇರಲಿ. ಅನ್ನಪೂರ್ಣೆ ಎಲ್ಲಿಯೂ ಹೋಗದಿರಲಿ. ಜಲದೇವಿಯ ಸನ್ನಿಧಾನದಲ್ಲಿ ನಿನ್ನ ಅಮೃತಹಸ್ತದಿಂದ ಸಂಸ್ಥಾಪಿಸಿಬಿಡು' ಎಂದು ಹೇಳಿದನು. ಸಿದ್ಧಾರೂಢರು ಹೇಳುತ್ತಿದ್ದಂತೆ ಮಠದ ಬಾವಿಯಲ್ಲಿ ನಾಗಲಿಂಗಜ್ಜ ನಿಕ್ಷೇಪಗೊಳಿಸಿಬಿಟ್ಟನು.

ಅನಂತರ ಮೂವರು ಸುಖಸಂಕಥಾವಿನೋದದಲ್ಲಿ ಮಗ್ನರಾದರು. ಒಮ್ಮೆ ನಾಗಲಿಂಗಜ್ಜ ಮಠದಲ್ಲಿಯೇ ಇದ್ದ ತೆಂಗಿನಕಾಯಿ ಎತ್ತಿಕೊಂಡು ಸಿದ್ಧಾರೂಢರ ಕೈಗೆಕೊಟ್ಟು 'ಇದನ್ನು ಮೂಸಿನೋಡು ಆರೂಢ' ಎಂದು ಹೇಳಿದನು. ಸಿದ್ಧಾರೂಢರು ಮೂಸಿನೋಡಿ 'ಒಳಗೆ ಕೆಟ್ಟಿದೆ' ಎಂದರು. ಅದನ್ನು ಒಡೆದು ನೋಡಿದಾಗ 'ಒಳಗೆಕೆಟ್ಟಿತ್ತು'. ಆಗ ನಾಗಲಿಂಗಜ್ಜ 'ಏನಿದರ ಅರ್ಥ ಆರೂಢ' ಎಂದು ಕೇಳಿದನು. 'ಎನ್ನಯ ಚಿತ್ತ ಅತ್ತಿಯಹಣ್ಣು ನೋಡಯ್ಯಾ, ವಿಚಾರಿಸಿದಡೆ ಹುರುಳಿಲ್ಲವಯ್ಯ' ಎಂಬ ಪದವನ್ನು ಸಿದ್ಧಾರೂಢರು ನಾಗಲಿಂಗಜ್ಜನಿಗೆ ಹೇಳಿದರು. ಅನಂತರ ಸಿದ್ಧಾರೂಢರು ಮಾತಿನ ವಿವರಣೆ ನೀಡಿದರು. ಅದಾದ ಮೇಲೆ ನಾಗಲಿಂಗಜ್ಜ ಶಿಶುವಿನಾಳ ಶರೀಫರ ಕೈಗೆ ತೆಂಗಿನಕಾಯೊಂದನ್ನು ಕೊಟ್ಟು ಮೂಸಿಸಿ ಒಡೆಸಿದನು. ಒಳಗೆ ಗಿಟುಕಾಗಿತ್ತು. ಆಗ ನಾಗಲಿಂಗಜ್ಜ 'ಶರೀಫಾ, ನೀನು ಪ್ರಪಂಚದಲ್ಲಿದ್ದರೂ ಅದಕ್ಕೆ ಅಂಟಿಕೊಳ್ಳದೆ ಪರಮಾರ್ಥವನ್ನು ಸಾಧಿಸಿರುವುದನ್ನು ನಿನ್ನ ಕಾಯಿ ಸೂಚಿಸುತ್ತಿದೆ. ಅನಂತರ ಸಿದ್ಧಾರೂಢರ ಕಡೆಗೆ ತಿರುಗಿ 'ನೀನು ಭಕ್ತರ ಆಡಂಬರಕ್ಕೆ ಅವರ ಹೊಗಳಿಕೆಗೆ, ಪೂಜೆ ಪುರಸ್ಕಾರಗಳಿಗೆ ಮರುಳಾದರೆ ಕೆಟ್ಟು ಹೋಗುತ್ತಿಯೆ. ಇದು ನಿನ್ನ ಕಾಯಿ ಸೂಚಿಸುತ್ತಿದೆ. ನೀನು ಎಚ್ಚರವಾಗಿರಬೇಕಪ್ಪಾ' ಎಂಬ ಮಾತನ್ನು 'ಲೀಲೆ'ಯಿಂದಲೇ ನುಡಿದರು.

ನಾಗಲಿಂಗಜ್ಜನು ಶರೀಫ ಮತ್ತು ಸಿದ್ಧಾರೂಢ ಇಬ್ಬರ ಅಂತರಂಗದ ನೆಲೆಯನ್ನು 'ತೆಂಗಿನಕಾಯಿ'ಯ ಮೂಲಕ ಸಂಕೇತಿಸಿದನು. ಇದು 'ಲೀಲೆ'ಯ ಒಂದು ಅವತರಣ. ಲೀಲೆ ಎಂಬುದು ಸಾಮಾನ್ಯ ಜನರಿಗೆ ಒಂದು ಅಸಾಮಾನ್ಯ ಘಟನೆ. ಆದರೆ, ಪ್ರತಿಯೊಬ್ಬ ಸಾಧಕರ ಬದುಕಿನಲ್ಲಿ ಇದು ಬರುವುದುಂಟು. ಅದರ ಒಂದು ಲಕ್ಷಣ ನಾಗಲಿಂಗಜ್ಜ ತೋರಿಸಿದ ನೇಗಿನಕುಳ ಮತ್ತು ತೆಂಗಿನಕಾಯಿಯ 'ಲೀಲೆ'ಯಲ್ಲಿ ಅಡಗಿದೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. 'ಪವಾಡ' ಎಂಬುದಕ್ಕೂ 'ಲೀಲೆ' ಎಂಬುದಕ್ಕೂ ಸೂಕ್ಷ್ಮವಾದ ವ್ಯತ್ಯಾಸವುದುಂಟು. ಪವಾಡಕ್ಕೆ ಭೌತಿಕ ಆವರಣವುಂಟು; ಅಲ್ಲಿ ದೈವದ ಸಾನ್ನಿಧ್ಯವಿಲ್ಲ. ಆದರೆ, 'ಲೀಲೆ'ಯಲ್ಲಿ ಭೌತಿಕ ಆವರಣದ ಜತೆಗೆ ಲೀಲೆಯ ಮರ್ಮವೂ ಉಂಟು. ಹೀಗಾಗಿ, ಇಲ್ಲಿ ದೈವಕ್ಕೆ ಸಾನ್ನಿಧ್ಯ ಒದಗಿದೆ. ಮಹಾಭಾರತದ ಅನುಶಾಸನಪರ್ವ, ಯೋಗವಾಸಿಷ್ಠ ಮುಂತಾದ ಗ್ರಂಥಗಳಲ್ಲಿ 'ಲೀಲೆ'ಗೆ ಸಂಬಂಧಿಸಿದ ಆದರೆ, 'ಅಷ್ಟಸಿದ್ಧಿ'ಯನ್ನು ಒಲಿಸಿಕೊಂಡವರ ತಂತ್ರಗಳುಂಟು.

■ **ಪುರಂಜೀವಿ**

## ಮಾತೇ ಮುತ್ತು

- ಅನ್ನ ಮತ್ತು ಹಸಿವುಗಳ ತೊಡಕನ್ನು ತೊಡಕಿಲ್ಲದೆ ಬಿಡಿಸುವ ಪ್ರಯೋಗಕ್ಕೆ ಧರ್ಮ ಎಂದು ಹೆಸರು.
  —ದ.ರಾ. ಬೇಂದ್ರೆ
- ಕಲಾವಿದ ಇರುವುದನ್ನು ಸಂಪೂರ್ಣವಾಗಿ ನಿರಾಕರಿಸದೆ ಅದರ ಅಪೂರ್ಣತೆಯನ್ನಷ್ಟೇ ಪ್ರಶ್ನಿಸುತ್ತಿರುತ್ತಾನೆ.
  —ಅಲ್ಬರ್ಟ್ ಕಮೂ
- ನಮ್ಮ ಉಸುರು, ನಮ್ಮ ಕಸುವು ಕನ್ನಡ; ನಮ್ಮ ಹೆಸರು, ನಮ್ಮ ಕಸುಬು ಕನ್ನಡ.
  —ಗೋಪಾಲಕೃಷ್ಣ ಅಡಿಗ
- ಸ್ನೇಹದಂತಹ ತಾಳ್ಮೆಯೂ ಒಂದು ಯುದ್ಧ ತಂತ್ರ.
  —ತರಾಸು
- ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ, ಅಷ್ಟು ಅಷ್ಟು ದೇವರೂ ಹಿರಿದು. ಆದುದರಿಂದ ದೇವರಿಗಿಂತ ಜೀವನವೇ ಹಿರಿದು.
  —ಶಿವರಾಮ ಕಾರಂತ
- ಸಾವರ್ ಜನಕ್ಕೆ ಸಾವರ್ ದೇವ್ರು, ಬಡವನ ದೇವ್ರು ವೊಟ್ಟೆ!
  —ಜಿ.ಪಿ. ರಾಜರತ್ನಂ
- ಎಲ್ಲರ ಆಸೆಗಳನ್ನು ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ.
  —ಮಹಾತ್ಮ ಗಾಂಧಿ
- ಆತ್ಮವಿಶ್ವಸದಿಂದ ಸಾಧ್ಯವೆಂದು ನಂಬುವವನಿಗೆ ಎಲ್ಲವೂ ಸಾಧ್ಯ.
  —ವರ್ಜಿಲ್
- ಚಂದನವಾಗಲಿ, ಜಾಜಿಯಾಗಲಿ, ಕಮಲದ ಹೂವಾಗಲಿ ಇವುಗಳೆಲ್ಲದರ ವಾಸನೆಗಿಂತ ಮನುಷ್ಯನ ನಡತೆಯ ಪರಿಮಳ ಮಿಗಿಲಿಲ್ಲದಷ್ಟು ಹೆಚ್ಚು.
  —ಬುದ್ಧ